ಹಾಸನದಲ್ಲಿ ಹಸಿರು ಕಾರ್ಡ್‌ಗಳ ವಿತರಣೆ

೪೫. ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).— ಮಾನ್ಯ ಆಹಾರ ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಸಿರು ಕಾರ್ಡ್ ಪಡೆಯಲು ವ್ಯಕ್ತಿಯೊಬ್ಬನಿಗೆ ಇರಬೇಕಾದ ಅರ್ಹತೆಗಳೇನು ?

ಆ) ೧೯೮೯ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಜನರಿಗೆ ಹಸಿರು ಕಾರ್ಡ್‌ಗಳನ್ನು ಕೊಡಲಾಗಿದೆ ?

ಇ) ಹಾಸನ ಕ್ಷೇತ್ರದಲ್ಲಿ ಎಷ್ಟು ಜನರಿಗೆ ಹಸಿರು ಕಾರ್ಡ್‌ಗಳನ್ನು ಕೊಡಲಾಗಿದೆ ?

ಈ) ಹಸಿರು ಕಾರ್ಡ್ ಹಂಚಿಕೆಯಲ್ಲಿ ಅನೇಕ ಜನ ಅನರ್ಹರಿಗೂ ಕಾರ್ಡ್‌ಗಳು ದೊರೆತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಎಲ್ಲಾ ಭೂರಹಿತ ಕೃಷಿ ಕಾರ್ಮಿಕರು ಮತ್ತು ಪ್ಲಾಂಟೇಷನ್ ಕಾರ್ಮಿಕರು ಹಾಗೂ ಗ್ರಾಮೀಣ ಪ್ರದೇಶಗಳ ಹಾಗೂ ೨೦,೦೦೦ ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಪಟ್ಟಣಗಳಲ್ಲಿ ವಾಸಿಸುವ ೩,೫೦೦ ರೂ.ಗಳಿಗಿಂತ ಕಡಿಮೆ ವಾರ್ಷಿಕ ವರಮಾನ ಉಳ್ಳ ಕುಟುಂಬಗಳು.

ಆ) ೧೧೪.

ಇ) ೧೧,೩೬೨

ಈ) ಹೌದು. ಅನರ್ಹ ಕುಟುಂಬಗಳಿಗೆ ನೀಡಿರುವ ಹಸಿರು ಪಡಿತರ ಚೀಟಿಗಳನ್ನು ರದ್ದು ಪಡಿಸಲು ೧೯೮೮ ರಲ್ಲಿಯೇ ಎಲ್ಲಾ ಜಿಲ್ಲಾ ಪರಿಷತ್ತುಗಳಿಗೆ ಆದೇಶ ನೀಡಲಾಗಿದೆ. ೧-೪-೮೮ ರಿಂದ ಜನವರಿ ೧೯೯೦ ರವರೆಗೆ ೩೨,೭೬೯ ಅನರ್ಹರಿಗೆ ನೀಡಲಾದ ಹಸಿರು ಪಡಿತರ ಚೀಟಿಗಳನ್ನು ರದ್ದುಪಡಿಸಿ ೧೨,೪೧೫ ಅರ್ಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳನ್ನು ಜಿಲ್ಲಾ ಪರಿಷತ್ತಿನವರು ನೀಡಿರುತ್ತಾರೆ. ಅಲ್ಲದೇ ಅನರ್ಹರಿಗೆ ನೀಡಲಾದ ಹಸಿರು ಪಡಿತರ ಚೀಟಿಗಳನ್ನು ನಿರಂತರವಾಗಿ ಪತ್ತೆ ಹಚ್ಚಲು ಮತ್ತು ಪತ್ತೆ ಹಚ್ಚಿದ ಪಡಿತರ ಚೀಟಿಗಳನ್ನು ಪಜಾ ಮಾಡುವ ಕಾರ್ಯವನ್ನು ಮುಂದುವರೆಸುವಂತೆ ಎಲ್ಲಾ ಜಿಲ್ಲಾ ಪರಿಷತ್ತು ಮುಖ್ಯ ಕಾರ್ಯದರ್ಶಿಗಳಿಗೆ ಆದೇಶ ನೀಡಲಾಗಿದೆ.

ಶ್ರೀ ಕೆ. ಎಚ್. ಹನುಮೇಗೌಡ.— ಮಾನ್ಯ ಅಧ್ಯಕ್ಷರೇ ೧-೪-೧೯೮೮ ರಿಂದ ೧೯೯೦ರವರೆಗೆ ಗ್ರೀನ್ ಕಾರ್ಡ್‌ಗಳನ್ನು ಅನರ್ಹ ಇದ್ದವರಿಗೂ ಕೊಟ್ಟಿರುವುದನ್ನು ತನಿಖೆ ಮಾಡಿ ೩೨,೭೬೯ ಕಾರ್ಡ್‌ಗಳನ್ನು ಕ್ಯಾನ್ಸಲ್ ಮಾಡಿ ಬೇರೆಯವರಿಗೆ ಕೊಟ್ಟಿರುವುದನ್ನು ತಮ್ಮ ಉತ್ತರದಲ್ಲಿ ಮಂತ್ರಿಗಳು ತಿಳಿಸಿದ್ದಾರೆ. ಯಾರು ಗ್ರೀನ್ ಕಾರ್ಡುಗಳನ್ನು ಪಡೆಯಲು ಅರ್ಹರಾಗಿದ್ದಾರೆ ಅವರಿಗೆ ಸಿಕ್ಕಿಲ್ಲ ಮತ್ತು ಅನರ್ಹರಾಗಿರುವವರಿಗೆ ಸಿಕ್ಕಿದೆ ಅದನ್ನು ಸಮಗ್ರವಾಗಿ ತನಿಖೆ ಮಾಡಿಸಿ ತಕ್ಷಣ ಯಾರು ಅರ್ಹರಿದ್ದಾರೆ ಅವರಿಗೆ ಗ್ರೀನ್ ಕಾರ್ಡನ್ನು ಕೊಡಲು ಎಷ್ಟು ದಿವಸದಲ್ಲಿ ಕ್ರಮತೆಗೆದುಕೊಳ್ಳುತ್ತೀರಿ, ಮತ್ತು ವ್ಯವಸ್ಥೆ ಮಾಡುತ್ತೀರೆಂಬುದನ್ನು ದಯವಿಟ್ಟು ತಿಳಿಸಿ.

ಶ್ರೀ ಕೆ. ಜೆ. ಜಾರ್ಜ್.— ಮಾನ್ಯ ಅಧ್ಯಕ್ಷರೇ, ನಾವು ಈಗಾಗಲೇ ಜಿಲ್ಲಾಪರಿಷತ್ತಿಗೆ ಆದೇಶವನ್ನು ಕೊಟ್ಟಿದ್ದೇವೆ. ಅನರ್ಹರಿಗೆ ಕೊಟ್ಟಿದ್ದಾರೆಂದು ಸರ್ಕಾರದ ಗಮನಕ್ಕೆ ಸಾಕಷ್ಟು ದೂರುಗಳು ಬಂದಿದೆ ಆದರೆ ಕೆಲವು ಜಿಲ್ಲಾಪರಿಷತ್‌ಗಳಲ್ಲಿರುವ ಅಧಿಕಾರಿಗಳು ಇದನ್ನು ವೆರಿಫಿಕೇಷನ್ ಮಾಡಿ ಕಾರ್ಡ್‌ಗಳನ್ನು ಕ್ಯಾನ್ಸಲ್ ಮಾಡಿದ್ದಾರೆ. ಉದಾಹರಣೆಗೆ ಕೊಡಗಿನ ಜಿಲ್ಲೆಯಲ್ಲಿ ಸುಮಾರು ೫ ಸಾವಿರ ಗ್ರೀನ್ ಕಾರ್ಡ್‌ಗಳನ್ನು ಕೊಟ್ಟಿರತಕ್ಕ್ಂಥದ್ದನ್ನು ಪತ್ತೆ ಹಚ್ಚಿದ್ದಾರೆ. ಮತ್ತೆ ಕೋಲಾರ ಜಿಲ್ಲೆಯಲ್ಲಿ ಅನರ್ಹರಿಗೆ ಗ್ರೀನ್‌ಕಾರ್ಡ್‌ಗಳನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಎಲ್ಲೆಲ್ಲಿ ಅನರ್ಹರಿಗೆ ಕೊಟ್ಟಿದ್ದಾರೆ ಅಂಥ ಕಾರ್ಡುಗಳನ್ನು ಪತ್ತೆಹಚ್ಚಿ, ಯಾರಿಗೆ ಕಾರ್ಡುಗಳನ್ನು ಕೊಟ್ಟಿಲ್ಲ ಅಂಥವರಿಗೆ ಕೊಡುವುದಕ್ಕೆ ಜಿಲ್ಲಾ ಪರಿಷತ್ತಿಗೆ ನಾವು ಆದೇಶಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಯಾವ ರೀತಿಯಾಲ್ಲಿ ತನಿಖೆ ಮಾಡುವುದಕ್ಕಾಗುವುದೆಂಬುದನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಕೆ. ಎಚ್. ಹನುಮೇಗೌಡ.— ಅನರ್ಹರಿಗೆ ಆದರೆ ಎಲಿಜಿಬಲ್ ಇಲ್ಲದವರಿಗೆ ಕಾರ್ಡುಗಳನ್ನು ಕೊಟ್ಟಿದ್ದರೆ ಕ್ಯಾನ್ಸಲ್ ಮಾಡುತ್ತೇವೆಂದು ಹೇಳಿದಿರಿ. ಈ ರೀತಿ ಕಾರ್ಡುಗಳನ್ನು ಕೊಟ್ಟಿರುವ ಎಷ್ಟು ಮಂದಿ ಅಧಿಕಾರಿಗಳ ಮೇಲೆ ಶಿಕ್ಷೆಯ ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ಜೆ. ಜಾರ್ಜ್.— ಇದರ ಪೂರ್ಣ ವಿವರ ಈಗ ನನ್ನ ಹತ್ತಿರ ಇಲ್ಲ. ವಿವರವನ್ನು ತರಿಸಿ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ರಾಜ್ಯದಲ್ಲಿ ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಮಂಜೂರಾಗಿರುವ ಸಾಲ

೨೧೨. ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೭ರ ವರ್ಷದಿಂದ ಈಚೆಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ರಾಜ್ಯದಲ್ಲಿ ಒಟ್ಟು ವಿತರಣೆ ಮಾಡಿರುವ ಸಾಲದ ಮೊತ್ತವೆಷ್ಟು?

ಆ) ಕೊಡಗು ಜಿಲ್ಲೆಯಲ್ಲಿ ವಿತರಣೆ ಮಾಡಿದ ಸಾಲದ ಮೊತ್ತ, ವಸೂಲಿಮಾಡಿದ ಮೊತ್ತ ಹಾಗೂ ಸಾಲ ಪಡೆದವರ ಸಂಖ್ಯೆ ಎಷ್ಟು?

ಇ) ಬಾಕಿ ಇರುವ ಸಾಲಗಾರರ ಒಟ್ಟು ಸಂಖ್ಯೆ ಮತ್ತು ವಸೂಲಾತಿಯಾಗದಿರುವುದಕ್ಕೆ ಕಾರಣಗಳೇನು?

ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸು ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ೧೯೮೭ರಿಂದ ೩೧-೧-೧೯೯೦ರವರೆಗೆ ರಾಜ್ಯದಲ್ಲಿ ಒಟ್ಟು ವಿತರಣೆಯಾಗಿರುವ ಸಾಲದ ಮೊತ್ತ ೪೧೪೭೦.೮೭ ಲಕ್ಷ ರೂಪಾಯಿಗಳು,

ಆ) ಕೊಡಗು ಜಿಲ್ಲೆಯಲ್ಲಿ ಪ್ರಾರಂಭದಿಂದ ಮಂಜೂರು ಮಾಡಿದ ಸಾಲಗಳ ಸಂಖ್ಯೆ ವಿತರಣೆ ಮಾಡಿದ ಮೊತ್ತ ಹಾಗೂ ವಸೂಲಾತಿಯ ವಿವರಗಳು ಈ ಕೆಳಗಿನಂತಿದೆ.—

ಮಂಜೂರಾತಿ ಆದ ಸಾಲಗಳ ಸಂಖ್ಯೆ.	೪೭೮
ಮಂಜೂರಾದ ಮೊತ್ತ.	೪೫೮.೮೧ ಲಕ್ಷ ರೂ.ಗಳು
ವಿತರಣೆಯಾದ ಮೊತ್ತ	೩೫೦.೩೯ ಲಕ್ಷ ರೂ.ಗಳು
ವಸೂಲಾತಿಯಾದ ಮೊತ್ತ	೧೭೯.೯೯ ಲಕ್ಷ ರೂ.ಗಳು

ಇ) ಕೊಡಗು ಜಿಲ್ಲೆಯಲ್ಲಿ ೩೧-೧-೧೯೯೦ರವರೆಗೆ ರಾಜ್ಯ ಹಣಕಾಸು ಸಂಸ್ಥೆಗೆ ೩೫೨ ಖಾತೆಗಳಿಂದ ಬರಬೇಕಾದ ಬಾಕಿ ಮೊತ್ತ ೨೨೮.೨೨ ಲಕ್ಷ ರೂ.ಗಳು. ಇದೇ ಅವಧಿಯಲ್ಲಿ ೧೫೫ ಘಟಕಗಳಿಂದ ೩೧.೦೦ ಲಕ್ಷ ರೂ.ಗಳ ಸುಸ್ತಿ ಮೊತ್ತ ಬರಬೇಕಾಗಿದೆ.

ಈ ಜಿಲ್ಲೆಯಲ್ಲಿ ಬಾಕಿ ನಿಲ್ಲಲು ಪ್ರಮುಖ ಕಾರಣಗಳು ಎಂದರೆ.—

ಅ) ವಿದ್ಯುತ್‌ಚ್ಛಕ್ತಿ ಕೊರತೆ

ಆ) ಅಗತ್ಯವಾದ ಕಚ್ಚಾ ಸಾಮಗ್ರಿಯು ದೊರೆಯದೆ ಇರುವುದು.

ಇ) ಮೂರುಕಟ್ಟಿ ತೊಂದರೆ

ಈ) ಈ ಜಿಲ್ಲೆಯಲ್ಲಿ ವರ್ಷದಲ್ಲಿ ೬ ತಿಂಗಳಿಗೂ ಹೆಚ್ಚು ಸಮಯ ಮಳೆಗಾಲವಿರುವುದು.

ಉ) ಸಕಾಲಕ್ಕೆ ಅಗತ್ಯವಾದ ಪ್ರಮಾಣದಲ್ಲಿ ದೊರೆಯದಿರುವ ದುಡಿಮೆ ಬಂಡವಾಳ.

SRI D.A. CHINNAPPA,— Sir, answering to my question (c), the Government have replied, 'Major reasons for not recovering the loans are, (1) Frequent power interruptions, 2) Non-availability of required raw materials, 3) Marketing problems, 4) Rainy season in the district is for more then 6 months in a year and (5) Inadequate and untimely working capital availability. Sir, this is not correct. ಹಾಗಿದ್ದರೆ, ವರ್ಕಿಂಗ್ ಫೆಸಿಲಿಟೀಸ್ ಇಲ್ಲ. ರಾ-ಮೆಟೀರಿಯಲ್ಸ್ ಸಿಗುವುದಿಲ್ಲವೆಂದು ಹೇಳಿದ ಮೇಲೆ ಏತಕ್ಕೆ ಅಂಥ ಉದ್ಯಮಿಗಳಿಗೆ ಸಾಲ ಕೊಡಬೇಕಾಗಿತ್ತು?